Member of the Surbana Jurong Group

**ನೆರವು**
ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್

**ಅನುಷ್ಠಾನ**
ಕರ್ನಾಟಕ ನೀರಾವರಿ ನಿಗಮ ನಿಯಮಿತ

**ಯೋಜನಾ ಸಹಾಯ ಸಂಸ್ಥೆ**
ಎಸ್.ಎಂ.ಇ.ಸಿ. ಇಂಡಿಯಾ ಪ್ರೈವೇಟ್ ಲಿಮಿಟೆಡ್

**ಸಹಯೋಗ**
ಭದ್ರಾ ಕಾಡಾ
ಅಡ್ವಾನ್ಸ್ಡ್ ಸೆಂಟರ್ ಫಾರ್ ಇಂಟಿಗ್ರೇಟೆಡ್ ವಾಟರ್ ರಿಸೋರ್ಸಸ್ ಮ್ಯಾನೇಜ್‌ಮೆಂಟ್





# ಜಲ ಸಂಪದ

ಕರ್ನಾಟಕ ಸಮಗ್ರ ಮತ್ತು ಸುಸ್ಥಿರ ಜಲಸಂಪನ್ಮೂಲ ನಿರ್ವಹಣೆ ಹೂಡಿಕೆ ಯೋಜನೆ
ಗೊಂದಿ ಆಧುನೀಕರಣ ಯೋಜನೆ ವಾರ್ತಾಪತ್ರ



## ವ್ಯವಸ್ಥಾಪಕ ನಿರ್ದೇಶಕರ ಸಂದೇಶ

ಕೃಷಿ, ತೋಟಗಾರಿಕೆ, ಕುಡಿಯುವ ನೀರು, ಕೈಗಾರಿಕೆ, ಹಾಗೂ ಇನ್ನಿತರೆ ವಲಯಗಳ ಬೇಡಿಕೆಗೆ ತಕ್ಕಂತೆ ಲಭ್ಯವಿರುವ ಜಲಸಂಪನ್ಮೂಲವನ್ನು ಒದಗಿಸುವುದು ರಾಜ್ಯ ಸರ್ಕಾರದ ಮುಖ್ಯ ಆಶಯವಾಗಿದೆ.

ಇದನ್ನು ಸಾಧ್ಯವಾಗಿಸಲು ಸಮುದಾಯ ಸಹಭಾಗಿತ್ವದ ಮೂಲಕ ಸಮಗ್ರ ಜಲ ಸಂಪನ್ಮೂಲ ನಿರ್ವಹಣೆ ಕಾರ್ಯವಿಧಾನವನ್ನು ಅಳವಡಿಸಿಕೊಳ್ಳುವತ್ತ ಮಹತ್ವದ ಹೆಜ್ಜೆ ಇಟ್ಟಿದೆ.

ಈ ಉದ್ದೇಶ ಸಾಧನೆಗಾಗಿ ಕರ್ನಾಟಕ ಸರ್ಕಾರವು ಏಷ್ಯಾ ಅಭಿವೃದ್ಧಿ ಬ್ಯಾಂಕಿನ ನೆರವಿನೊಂದಿಗೆ 'ಕರ್ನಾಟಕ ಸಮಗ್ರ ಮತ್ತು ಸುಸ್ಥಿರ ಜಲ ಸಂಪನ್ಮೂಲ ನಿರ್ವಹಣೆ ಹೂಡಿಕೆ ಯೋಜನೆಯನ್ನು ಆರಂಭಿಸಿದೆ. ಯೋಜನೆಯ ಭಾಗವಾಗಿ ಶಿವಮೊಗ್ಗ ಜಿಲ್ಲೆಯ ಭದ್ರಾ ಜಲಾಶಯ ವ್ಯಾಪ್ತಿಯಲ್ಲಿ ಬರುವ ಗೊಂದಿ ಅಣೆಕಟ್ಟೆಯ ನೀರಾವರಿ ಕಾಲುವೆಗಳ ಸಮಗ್ರ ಆಧುನೀಕರಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

100 ವರ್ಷಗಳ ಹಿಂದೆ ನಿರ್ಮಾಣವಾದ ಈ ಅಣೆಕಟ್ಟೆಯು ನೂರಾರು ಹಳ್ಳಿಗಳ ಕೃಷಿ ಅಗತ್ಯಗಳಿಗೆ ನೀರು ಪೂರೈಸುತ್ತಿದೆ. ಇದರ ವ್ಯಾಪ್ತಿಯಲ್ಲಿ 10 ನೀರು ಬಳಕೆದಾರರ ಸಹಕಾರ ಸಂಘಗಳಿದ್ದು ಅವುಗಳ ಸಹಭಾಗಿತ್ವದಲ್ಲಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಕಾಮಗಾರಿಗಳು ನಡೆಯುತ್ತಿರುವುದು ಯೋಜನೆಯ ಮುಖ್ಯ ವೈಶಿಷ್ಟ್ಯ.

ಯೋಜನೆಯ ಚಟುವಟಿಕೆಗಳು, ಸಾಧನೆ ಹಾಗೂ ಕಲಿಕೆಗಳನ್ನು ಹಂಚಿಕೊಳ್ಳಲು ಈ ವಾರ್ತಾ ಪತ್ರವನ್ನು ಪ್ರಕಟಿಸುತ್ತಿದ್ದು ಇದರ ಪ್ರಯೋಜನವನ್ನು ಎಲ್ಲರೂ ಪಡೆಯುವಂತಾಗಲಿ ಎಂದು ಹಾರೈಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಗುಂಗೆ
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು



## ಮುಖ್ಯ ಇಂಜಿನಿಯರ್ ಅವರ ಸಂದೇಶ

ಸಮುದಾಯ ಸಹಭಾಗಿತ್ವದ ಮೂಲಕ ಅನುಷ್ಠಾನಗೊಳ್ಳುತಿರುವ ಪ್ರಾಯೋಗಿಕ ಯೋಜನೆ ಇದು. ಇದರ ಯಶಸ್ಸು ಮುಂದೆ ಹತ್ತಾರು ಇಂತಹುದೇ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಪ್ರೇರಣೆಯಾಗಲಿದೆ. ನೀರು ಬಳಕೆದಾರ ಸಂಹಕಾರ ಸಂಘಗಳಿಗೇ ಅಚ್ಚುಕಟ್ಟು ಪ್ರದೇಶದಲ್ಲಿ ಬರುವ ಕಾಮಗಾರಿ ನಿರ್ವಹಣೆಯ ಜವಾಬ್ದಾರಿ ನೀಡಿರುವುದು ಇದರ ವೈಶಿಷ್ಟ್ಯ. ಇದರಿಂದ ಸಂಘಗಳಿಗೆ ನವಚೇತನ ಬಂದಂತಾಗಿದೆ.

ಈ ನಿಟ್ಟಿನಲ್ಲಿ ಸಂಘಗಳಿಗೆ ನಿರಂತರ ಜ್ಞಾನವರ್ಧನೆ, ಹಾಗೂ ಸಾಮರ್ಥ್ಯ ವರ್ಧನೆಗೆ ಕ್ರಮ ವಹಿಸಲಾಗಿದೆ. ಹಲವು ಮಾಧ್ಯಮ ಗಳ ಮೂಲಕ ಅವರ ಅರಿವಿನ ದಾರಿಗಳನ್ನು ವಿಸ್ತರಿಸಲಾಗುತ್ತಿದೆ. ಇದಕ್ಕಾಗಿ ತರಬೇತಿಗಳು, ಕಾರ್ಯಾಗಾರಗಳು, ರೇಡಿಯೋ ಮುಂತಾದ ಹಲವು ಮಾರ್ಗಗಳನ್ನು ಅನುಸರಿಸಲಾಗುತ್ತಿದೆ. ಈ ವಾರ್ತಾಪತ್ರವೂ ಅವುಗಳಲ್ಲೊಂದು. ಯೋಜನೆಯ ಪ್ರಗತಿ, ಯಶೋಗಾಥೆಗಳು, ಕಲಿಕೆಗಳು ಹಾಗೂ ರೈತರ ಅನುಭವಗಳನ್ನು ದಾಖಲಿಸಿ ವಿವಿಧ ಭಾಗೀದಾರರಿಗೆ ಇದರ ಮೂಲಕ ತಲುಪಿಸಲಾಗುತ್ತದೆ. ವಾರ್ತಾಪತ್ರ ಯಶಸ್ವಿಯಾಗಲಿ ಹಾಗೂ ತನ್ನ ಉದ್ದೇಶ ಸಾಧನೆಯಲ್ಲಿ ಮುನ್ನಡೆಯಲಿ ಎಂದು ಹಾರೈಸುತ್ತೇನೆ.

ಶ್ರೀ ಆರ್.ಪಿ.ಕುಲಕರ್ಣಿ
ಮುಖ್ಯ ಇಂಜಿನಿಯರ್, ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ

## ಗೊಂದಿ ಆಧುನೀಕರಣ ಯೋಜನೆ ರೇಡಿಯೋ ಸರಣಿ ಕಾರ್ಯಕ್ರಮ

ಗೊಂದಿ ನಾಲೆಯ ಆಧುನೀಕರಣ ಯೋಜನೆಯ ಅಂಗವಾಗಿ ಭದ್ರಾವತಿ ಆಕಾಶವಾಣಿ ಕೇಂದ್ರದಿಂದ ಸರಣಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. 'ನೆಲ-ಜಲ-ಜನ' ಹೆಸರಿನ ಈ ಸರಣಿಯು ದಿನಾಂಕ 17.04.2017ರಿಂದ ಪ್ರತಿ ಸೋಮವಾರ ಸಂಜೆ 6.55 ನಿಮಿಷಕ್ಕೆ ಕೃಷಿರಂಗ ವಿಭಾಗದಿಂದ ಪ್ರಸಾರವಾಗಲಿದೆ.


ಸಂವರ್ಧನದಲ್ಲಿ ಭಾಗವಹಿಸಿರುವ ಬಾರಂದೂರು ಗ್ರಾಮದ ಹೆಣ್ಣುಮಕ್ಕಳು

13 ವಾರಗಳ ಕಾಲ ಪ್ರಸಾರವಾಗುವ ಸರಣಿಯಲ್ಲಿ ಗೊಂದಿ ಅಣೆಕಟ್ಟೆಯ ಇತಿಹಾಸ, ನಿರ್ಮಾಣ, ಸಮಸ್ಯೆಗಳು, ಯೋಜನೆಯ ಪರಿಚಯ, ಹಮ್ಮಿಕೊಂಡಿರುವ ವಿವಿಧ ಕಾರ್ಯಕ್ರಮಗಳು, ಭಾಗೀದಾರರ ಪರಿಚಯ, ಕೃಷಿ ಚಟುವಟಿಕೆಗಳು, ಮಿತ ನೀರಿನ ಬಳಕೆ ಮೂಲಕ ಭತ್ತದ ಬೇಸಾಯ ಮಾಡುವ ವಿಧಾನ, ಲಿಂಗತ್ವ ಮತ್ತು ಸಾಮಾಜಿಕ ಸಂಘಟನೆ ಮುಂತಾದ ಹಲವು ವಿಷಯಗಳನ್ನು ಸರಣಿಯಲ್ಲಿ ಅಳವಡಿಸಲಾಗಿದೆ. ಪ್ರತಿ ಸರಣಿಯ ಜೊತೆಗೆ ವಿಷಯಕ್ಕೆ ಪೂರಕವಾದ ಇಂಪಾದ ಹಾಡುಗಳೂ ಇರುತ್ತವೆ.

ಭದ್ರಾ ಕಾಡಾ ಅಧ್ಯಕ್ಷರು, ಕರ್ನಾಟಕ ನೀರಾವರಿ ನಿಗಮದ ಮುಖ್ಯ ಇಂಜಿನಿಯರ್ ಹಾಗೂ ಇನ್ನಿತರೆ ಅಧಿಕಾರಿಗಳು, ಗುಣಮಟ್ಟ ನಿಯಂತ್ರಣ ಅಧಿಕಾರಿಗಳು, ಸ್ಪೈಕ್ ಸಂಸ್ಥೆಯ ಸಿಬ್ಬಂದಿ, ನೀರು ಬಳಕೆದಾರ ಸಹಕಾರ ಸಂಘಗಳ ಪದಾಧಿಕಾರಿಗಳು, ಮಾದರಿ ಕೃಷಿಕರು, ಕೃಷಿಕ ಹೆಣ್ಣುಮಕ್ಕಳು ಹಾಗೂ ಇತರರು ಪ್ರತಿ ಸಂಚಿಕೆಯಲ್ಲಿ ಭಾಗವಹಿಸಿ ತಮ್ಮ ಅನಿಸಿಕೆ ಹಾಗೂ ಅನುಭವವನ್ನು ಹಂಚಿಕೊಳ್ಳುವಂತೆ ಸರಣಿಯನ್ನು ವಿನ್ಯಾಸ ಮಾಡಲಾಗಿದೆ.

## ಕಾಮಗಾರಿ ನಿರ್ವಹಣೆ, ಛಾಯಾಚಿತ್ರ, ವರದಿ ಮತ್ತು ವರದಿ ಬರವಣಿಗೆ ಕುರಿತು ಒಂದು ದಿನದ ತರಬೇತಿ

ದಿನಾಂಕ 17.12.2016ರಂದು ಕಾಡಾ ಕಛೇರಿ ಸಭಾಂಗಣದಲ್ಲಿ ಈ ತರಬೇತಿಯನ್ನು ಆಯೋಜನೆಗೊಳಿಸಲಾಗಿತ್ತು. ಭದ್ರಾ ಕಾಡಾ ಅಧ್ಯಕ್ಷರಾದ ಶ್ರೀ ಸುಂದರೇಶ್ ಅವರು ಮುಖ್ಯ ಅತಿಥಿಗಳಾಗಿ ಮಾತನಾಡಿ "ವಿಶ್ವ ಅಭಿವೃದ್ಧಿ ಬ್ಯಾಂಕಿನ ಅನುದಾನದಲ್ಲಿ ಗೊಂದಿ ಆಧುನೀಕರಣ ಕಾಮಗಾರಿಗಳು ಆರಂಭವಾಗಿದ್ದು ಇವುಗಳ ಅನುಷ್ಠಾನದಲ್ಲಿ ನೀರು ಬಳಕೆದಾರರ ಸಹಕಾರ ಸಂಘಗಳ ಪಾತ್ರ ಬಹುಮುಖ್ಯವಾಗಿದೆ, ಅಚ್ಚುಕಟ್ಟು ಪ್ರದೇಶದ ರೈತರಿಗೆ ಇದು ಉಪಯುಕ್ತವಾದುದು, ಹಾಗಾಗಿ ಎಲ್ಲರೂ ಸಹಕರಿಸಿ ಗುಣಮಟ್ಟದ ಕೆಲಸಗಳು ನಡೆಯುವಂತೆ ಮುತುವರ್ಜಿವಹಿಸಿ, ಕಾಡಾ ಸದಾ ನಿಮ್ಮೊಂದಿಗೆ ಇರುತ್ತದೆ" ಎಂದು ತಿಳಿಸಿದರು.


ತರಬೇತಿಯಲ್ಲಿ ಮಾತನಾಡುತ್ತಿರುವ ಕಾಡಾ ಅಧ್ಯಕ್ಷರಾದ ಶ್ರೀ ಸುಂದರೇಶ್

ತರಬೇತಿಯನ್ನು ಉದ್ಘಾಟನೆ ಮಾಡಿದ ಮುಖ್ಯ ಇಂಜಿನಿಯರ್ ಶ್ರೀ ಆರ್.ಪಿ.ಕುಲಕರ್ಣಿ ಅವರು "ಗೊಂದಿ ಎಡದಂಡೆ ಮತ್ತು ಬಲದಂಡೆಯಲ್ಲಿ ಕಾಮಗಾರಿಗಳು ಬಿರುಸಿನಿಂದ ನಡೆಯುತ್ತಿವೆ. ಅಭಿಯಂತರರು ಈ ಸಂದರ್ಭದಲ್ಲಿ ಸ್ಥಳಕ್ಕೆ ಭೇಟಿ ನೀಡಿ ಗುಣಮಟ್ಟ ಪರಿಶೀಲನೆ ಮಾಡುತ್ತಿದ್ದಾರೆ, ಸಂಘದವರು ಸಹ ಉತ್ತಮ ರೀತಿಯಲ್ಲಿ ಸಹಕರಿಸಿ" ಎಂದು ಮನವಿ ಮಾಡಿದರು.

ಅಭಿಯಂತರರಾದ ಶ್ರೀ ನಂಜುಂಡಸ್ವಾಮಿ ನೀರು ಬಳಕೆದಾರರ ಸಹಕಾರ ಸಂಘಗಳೇ ಕಾಮಗಾರಿ ನಿರ್ವಹಿಸುವಾಗ ತೆಗೆದುಕೊಳ್ಳಬೇಕಾದ ಅಗತ್ಯ ಎಚ್ಚರಿಕೆಗಳ ಬಗ್ಗೆ ವಿವರವಾಗಿ ಮಾಹಿತಿ ನೀಡಿದರು. ಊಟದ ನಂತರ ಕಾಮಗಾರಿ ಅನುಷ್ಠಾನದಲ್ಲಿ ದಾಖಲಾತಿಗಳು ಅದರಲ್ಲೂ ಫೋಟೋ ದಾಖಲಾತಿ ಅಗತ್ಯವಾಗಿದ್ದು ಬೇರೆ-ಬೇರೆ ಹಂತಗಳಲ್ಲಿ ಫೋಟೊ ತೆಗೆಯುವ ವಿಧಾನ ಹಾಗೂ ವರದಿ ತಯಾರಿಕೆ ಬಗ್ಗೆ ಸಂವಹನ ತಜ್ಞ ಮಲ್ಲಿಕಾರ್ಜುನ ವಿವರಿಸಿದರು. ವಿಶ್ವ ಅಭಿವೃದ್ಧಿ ಬ್ಯಾಂಕಿನ ಸಂವಹನ ಕಾರ್ಯತಂತ್ರಗಳ ಬಗ್ಗೆ ಸಾಮಾಜಿಕ ಅಭಿವೃದ್ಧಿ ಮತ್ತು ಲಿಂಗತ್ವ ತಜ್ಞರಾದ ಶ್ರೀ ಬಾಲಚಂದ್ರ ಕುರುಪ್ ಮಾತನಾಡಿದರು.

ಯೋಜನಾ ಸಮಾಲೋಚಕ ಸಂಸ್ಥೆಯ ತಂಡದ ಉಪನಾಯಕರಾದ ಶ್ರೀ ಶ್ರೀನಿವಾಸ್ ಮುದ್ರಕರ್ತ ಪ್ರಾಸ್ತಾವಿಕವಾಗಿ ತರಬೇತಿಯ ಉದ್ದೇಶಗಳನ್ನು ವಿವರಿಸಿದರು. ಕಾರ್ಯಪಾಲಕ ಇಂಜಿನಿಯರ್ ಶ್ರೀ ವೆಂಕಟೇಶ್, ಕರ್ನಾಟಕ ನೀರಾವರಿ ನಿಗಮ ಮತ್ತು ಭದ್ರಾ ಕಾಡಾದ ವಿವಿಧ ಇಂಜಿನಿಯರುಗಳು ಹಾಗೂ ಅಧಿಕಾರಿಗಳು, ಗೊಂದಿ ಅಚ್ಚುಕಟ್ಟು ಪ್ರದೇಶದ ಹತ್ತು ನೀರು ಬಳಕೆದಾರರ ಸಹಕಾರ ಸಂಘಗಳ ಅಧ್ಯಕ್ಷರು, ಕಾರ್ಯದರ್ಶಿ ಹಾಗೂ ಪದಾಧಿಕಾರಿಗಳೂ ಸೇರಿದಂತೆ 100ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು.

### ಕಾಲುವೆ ಪ್ರದೇಶದ ಅಭಿವೃದ್ಧಿ ಕಾಮಗಾರಿಗಳನ್ನು ಸಂಘದ ವತಿಯಿಂದ ಕೈಗೊಳ್ಳುವಾಗ ಗಮನಿಸಬೇಕಾದ ಅಂಶಗಳು


- ಸಂಘದ ವತಿಯಿಂದ ಕೈಗೊಳ್ಳುವ ಕಾಮಗಾರಿಗಳಿಗೆ ಆಗಬಹುದಾದ ಮೊತ್ತದಲ್ಲಿ ಕೂಲಿಗಾಗಿ ಎಷ್ಟು ಹಣ ಅಗತ್ಯ ಹಾಗು ಸಾಮಾಗ್ರಿಗಳಿಗಾಗಿ ಎಷ್ಟು ಹಣ ಅಗತ್ಯ ಎಂಬುದನ್ನು ಲೆಕ್ಕಿಸಬೇಕು.
- ಕಾಮಗಾರಿಗೆ ಅಗತ್ಯವಾದ ಸಾಮಗ್ರಿಗಳನ್ನು ಪಟ್ಟಿ ಮಾಡಿ ಅವುಗಳ ಪರಿಮಾಣಗಳನ್ನು ಲೆಕ್ಕ ಹಾಕಿ ಸಾಮಗ್ರಿಗಳು ಅತೀ ಕಡಿಮೆ ದರದಲ್ಲಿ (ಆದರೆ, ಉತ್ತಮ ಗುಣಮಟ್ಟದ) ಎಲ್ಲಿ ಸಿಗುತ್ತವೆ ಎಂಬುದನ್ನು ಗುರುತಿಸಿ ಅಂತಹ ಸ್ಥಳದಿಂದಲೇ ಖರೀದಿ ಮಾಡಬೇಕು.
- ಕೂಲಿ ಕೆಲಸ ಮಾಡುವವರ ದಿನನಿತ್ಯದ ಹಾಜರಿಯನ್ನು ಹಾಜರಿ ಪುಸ್ತಕದಲ್ಲಿ ಕ್ರಮಾನುಸಾರ ನಮೂದಿಸಬೇಕು ಹಾಜರಿಯನ್ನು ಬೆಳಿಗ್ಗೆ ಹಾಗೂ ಮಧ್ಯಾಹ್ನ ತಪ್ಪದೇ ಹಾಕಬೇಕು.
- ಸರಬರಾಜು ಮಾಡಿದ ಸಾಮಾಗ್ರಿಗಳಿಗೆ ದರಗಳನ್ನು ಆಯಾ ಕಾಮಗಾರಿಗಳು ಮುಕ್ತಾಯವಾದ ಕೂಡಲೇ ಸಂಬಂಧಪಟ್ಟವರಿಗೆ ಹಣ ಪಾವತಿ ಮಾಡಬೇಕು.
- ಸಂಘದ ವತಿಯಿಂದಲೇ ಕೈಗೊಂಡ ಕಾಮಗಾರಿಗಳ, ಒಟ್ಟು ಕೂಲಿ ಹಾಗೂ ಸಾಮಗ್ರಿಗಳ ಮೊತ್ತಗಳು ಆ ಕಾಮಗಾರಿಗೆ ಅಂದಾಜಿನಲ್ಲಿ ಅಳವಡಿಸಿರುವ ಮೊತ್ತಕ್ಕಿಂತ ಹೆಚ್ಚಾಗಬಾರದು. ಈ ದಿಸೆಯಲ್ಲಿ ಕಾಮಗಾರಿಯ ಮೊತ್ತದ ಕನಿಷ್ಠ ಶೇ. 10 ರಷ್ಟು ಉಳಿತಾಯವಾಗುವಂತಿರಬೇಕು.

### ಕಾಮಗಾರಿಯ ಗುಣಮಟ್ಟ ಕಾಪಾಡುವ ವಿಧಾನಗಳು

- ಕಾಮಗಾರಿಯಲ್ಲಿ ಉಪಯೋಗಿಸುವ ಸಾಮಾಗ್ರಿಗಳು ಗುಣಮಟ್ಟ ಒಳ್ಳೆಯದಾಗಿದ್ದು, ಅನುಮೋದಿತ ರೀತಿಯಲ್ಲಿ ಕಾಮಗಾರಿಯನ್ನು ಮಾಡಿದ್ದಲ್ಲಿ ಉತ್ತಮ ಗುಣಮಟ್ಟದ ಕಾಮಗಾರಿಗಳನ್ನು ನಿರೀಕ್ಷಿಸಬಹುದು.
- ಕಾಮಗಾರಿಗೆ ಬೇಕಾಗುವ ಮರಳು, ಜಲ್ಲಿ, ಸಿಮೆಂಟ್, ಮಣ್ಣು ಇವುಗಳನ್ನು ಉಪಯೋಗಿಸುವ ಮೊದಲು ಇಲಾಖೆಯಿಂದ ನಿಯೋಜಿಸಿರುವ ಗುಣನಿಯಂತ್ರಣ ಅಧಿಕಾರಿಗಳಿಂದ ಪರೀಕ್ಷೆಗೆ ಒಳಪಡಿಸಿ ಸೂಕ್ತವಾದುದನ್ನು ಮಾತ್ರ ಉಪಯೋಗಿಸಬೇಕು.
- ಒಳ್ಳೆಯ ಗುಣಮಟ್ಟದ ಒಂದು ಅಡಿ ಗಾತ್ರಕ್ಕಿಂತ ಹೆಚ್ಚಾದ ಒರಟು ಕಲ್ಲುಗಳನ್ನು ಸಂಬಂಧಿಸಿದ ಕೆಲಸಗಳಿಗೆ ಉಪಯೋಗಿಸಬೇಕು.
- ಕರ್ನಾಟಕ ನೀರಾವರಿ ನಿಗಮದವರು (ಕ.ನೀ.ನಿ) ನೀರುಬಳಕೆದಾರರ ಸಂಘದವರ ಕಾಮಗಾರಿಗಳಿಗೆ ಗುಣನಿಯಂತ್ರಣ ಅಧಿಕಾರಿಗಳನ್ನು ನಿಯೋಜಿಸಿದ್ದು ಅವರಿಂದ ಕಾಮಗಾರಿಗಳು ನಡೆಯುವಾಗ ಪ್ರತಿ ಅಂಶಗಳನ್ನು ಪರೀಕ್ಷೆ ಮಾಡಿಸಬೇಕು.

### ಭೌತಿಕ ಪ್ರಗತಿ ನಕ್ಷೆ

ಇಲ್ಲಿ ಕೊಟ್ಟಿರುವ ನಕ್ಷೆಯು ಗೊಂದಿ ಆಧುನೀಕರಣ ಯೋಜನೆಯ ಮುಖ್ಯ ಕಾಲುವೆಗಳ ಮಾರ್ಚ್ 2017ರ ಅಂತ್ಯದವರೆಗಿನ ಪ್ರಗತಿಯ ಚಿತ್ರಣ ನೀಡುತ್ತದೆ. ಎಡದಂಡೆ ನಾಲೆಯಲ್ಲಿ ಶೇಕಡ 90.92ರಷ್ಟು ಕಾಮಗಾರಿಗಳು ಪೂರ್ಣವಾಗಿರುವುದನ್ನು ನಕ್ಷೆಯಲ್ಲಿ ಕಾಣಬಹುದು. ಬಲದಂಡೆ ನಾಲೆಯಲ್ಲಿ ಈ ಪ್ರಮಾಣವು ಶೇಕಡ 18.36ರಷ್ಟು. ಎಂಬ್ಯಾಕ್ ಮೆಂಟ್ ಸಮಸ್ಯೆಯಿಂದಾಗಿ ಇಲ್ಲಿ ಸ್ವಲ್ಪಮಟ್ಟಿಗೆ ಕಾಮಗಾರಿ ಅನುಷ್ಠಾನದಲ್ಲಿ ನಿಧಾನವಾಗಿದ್ದು ಮುಂದಿನ ದಿನಗಳಲ್ಲಿ ಹೆಚ್ಚಿನ ಆದ್ಯತೆ ನೀಡಲು ಸೂಚಿಸಲಾಗಿದೆ.



## ನೀರು ಬಳಕೆದಾರರ ಸಹಕಾರ ಸಂಘಗಳ ಒಂದು ದಿನದ ಕಾರ್ಯಾಗಾರ





**ಯೋಜನಾ ವ್ಯಾಪ್ತಿ:**
ಯೋಜನೆಯು ಮುಖ್ಯವಾಗಿ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ತನ್ನ ಕಾರ್ಯಕ್ಷೇತ್ರವನ್ನು ಕೇಂದ್ರೀಕರಿಸಿದ್ದು, ತುಂಗಭದ್ರ ಉಪಜಲಾನಯನದಲ್ಲಿ ಕಾಮಗಾರಿಗಳು ಅನುಷ್ಠಾನಗೊಳ್ಳಲಿವೆ.

"ನೂರು ವರ್ಷಗಳ ಹಿಂದೆ ನಿರ್ಮಾಣವಾಗಿರುವ ಗೊಂದಿ ಅಣೆಕಟ್ಟೆಯು ನಮ್ಮ ಪೂರ್ವಜರು ನಮಗೆ ಬಿಟ್ಟುಹೋಗಿರುವ ಅತ್ಯಮೂಲ್ಯ ಆಸ್ತಿ, ಸರ್ಕಾರವು ವಿಶ್ವ ಅಭಿವೃದ್ಧಿ ಬ್ಯಾಂಕಿನ ಅನುದಾನದಲ್ಲಿ ಇದರ ಪುನರುಜ್ಜೀವನ ಕೈಗೊಂಡಿದ್ದು ಇದನ್ನು ಮಾದರಿ ಯೋಜನೆಯನ್ನಾಗಿ ರೂಪಿಸುವ ಜವಾಬ್ದಾರಿ ನೀರು ಬಳಕೆದಾರ ಸಂಘಗಳ ಹೆಗಲ ಮೇಲಿದೆ, ನಿಮ್ಮ ಪರಿಣಾಮಕಾರಿ ಭಾಗವಹಿಸುವಿಕೆಯ ಮೇಲೆ ಇದರ ಯಶಸ್ಸು ನಿಂತಿದೆ" ಎಂದು ಮುಖ್ಯ ಇಂಜಿನಿಯರ್‌ರವರಾದ ಶ್ರೀ ಆರ್.ಪಿ.ಕುಲಕರ್ಣಿ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ನೀರಾವರಿ ನಿಗಮ, ಭದ್ರಾ ಕಾಡಾ, ಯೋಜನಾ ಸಮಾಲೋಚಕ ಸಂಸ್ಥೆಯಾದ ಎಸ್.ಎಂ.ಇ.ಸಿ. ಇಂಡಿಯಾ ಪ್ರೈವೇಟ್ ಲಿಮಿಟೆಡ್ ವತಿಯಿಂದ ಕಾಡಾ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಗೊಂದಿ ನೀರು ಬಳಕೆದಾರರ ಸಹಕಾರ ಸಂಘಗಳ ಒಂದು ದಿನದ ಕಾರ್ಯಾಗಾರವನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಭದ್ರಾ ಕಾಡಾದ ಆಡಳಿತಾಧಿಕಾರಿಗಳಾದ ಶ್ರೀ ಅಂಬಾಡಿ ಮಾಧವ್ ಅವರು ಮುಖ್ಯ ಅತಿಥಿಗಳಾಗಿ ಮಾತನಾಡಿ "ಜಲಾಶಯದಲ್ಲಿ ನೀರಿನ ಪ್ರಮಾಣ ಕಡಿಮೆ ಇರುವುದರಿಂದ ಭತ್ತವನ್ನು ಹೊರತುಪಡಿಸಿ ಪರ್ಯಾಯ ಬೆಳೆಗಳಾದ ಹೂವು, ಶೇಂಗಾ, ಹೆಸರು, ಮೆಕ್ಕೆಜೋಳ ಇತ್ಯಾದಿಗಳನ್ನು ಅಳವಡಿಸಿಕೊಳ್ಳಿ, ಭತ್ತವನ್ನು 'ಶ್ರೀ' ಪದ್ಧತಿಯಲ್ಲಿ ಬೆಳೆದರೆ ನೀರು, ಬೀಜ ಹಾಗೂ ಖರ್ಚಿನಲ್ಲಿ ಉಳಿತಾಯವಾಗಲಿದೆ" ಎಂದು ಕರೆನೀಡಿದರು.

ಯೋಜನ ಸಮಾಲೋಚಕ ಸಹಾಯ ಸಂಸ್ಥೆಯ ತಂಡದ ಉಪನಾಯಕರಾದ ಶ್ರೀ ಶ್ರೀನಿವಾಸ್ ಮುದ್ರಕರ್ತ ಅವರು ಸಂಘಗಳ ಮನೋಭಾವ ಬದಲಾವಣೆ, ಒಗ್ಗಟ್ಟು, ಪ್ರಾಮಾಣಿಕತೆ ಹಾಗೂ ಕ್ರಿಯಾಶೀಲತೆಯ ಬಗ್ಗೆ ವಿವರಿಸಿದರು. ಗೊಂದಿ ನೀರಾವರಿ ಕಾಲುವೆಗಳನ್ನು ಸರಿಪಡಿಸಿಕೊಳ್ಳಲು ಇದೊಂದು ಉತ್ತಮ ಅವಕಾಶ, ಇದನ್ನು ಸದುಪಯೋಗಪಡಿಸಿಕೊಳ್ಳಿ ಎಂದು ತಿಳಿಸಿದರು.

ಹೊಸಳ್ಳಿ ನೀರು ಬಳಕೆದಾರ ಸಹಕಾರ ಸಂಘದ ವೀರೇಶ್ ಅವರು ಹೇಗೆ ಕಳೆದ 10 ಆವರ್ಷಗಳಲ್ಲಿ ತಮ್ಮ ಸಂಘವು ನೀರಿನ ಶುಲ್ಕ ಸಂಗ್ರಹ, ಕಾಮಗಾರಿಗಳ ಅನುಷ್ಠಾನ, ಶ್ರಮದಾನ, ಲೆಕ್ಕಪತ್ರ ನಿರ್ವಹಣೆ ಹಾಗೂ ಇತರ ಸಾಮಾಜಿಕ ಕಾರ್ಯಗಳನ್ನು ನಿರ್ವಹಿಸುತ್ತಿದೆ ಎಂಬುದನ್ನು ಉದಾಹರಣೆ ಸಹಿತ ಸಭೆಯ ಮುಂದಿಟ್ಟರು. ಹೊಳೆಭೈರೇನಹಳ್ಳಿಯ ಪ್ರಗತಿಪರ ರೈತರಾದ ಶ್ರೀ ಕುಮಾರ್ ನಾಯ್ಡು ಕಡಿಮೆ ನೀರಿನಲ್ಲಿ ಕೃಷಿ, ಉಪಕಸುಬುಗಳ ಜೋಡಣೆ, ದೇಸೀ ರಾಸು ಹಾಗೂ ಭತ್ತದ ತಳಿಗಳ ಸಂರಕ್ಷಣೆಯ ತಮ್ಮ ಅನುಭವವನ್ನು ಹಂಚಿಕೊಂಡರು.

ಸಹಾಯಕ ಅಭಿಯಂತರರಾದ ಶ್ರೀ ಉಮೇಶ್ ಗೊಂದಿ ಪುನರುಜ್ಜೀವನದ ಯೋಜನಾ ಪ್ರದೇಶ, ಕಾಲುವೆಗಳ ವಿವರ, ಸಮಸ್ಯೆಗಳು ಹಾಗೂ ಪ್ರಸ್ತುತ ಕೈಗೊಂಡಿರುವ ಪುನಶ್ಚೇತನ ಕಾಮಗಾರಿಗಳ ಬಗ್ಗೆ ಮಾಹಿತಿ ನೀಡಿದರು.

ಇಡೀ ದಿನ ಗೊಂದಿ ನೀರು ಬಳಕೆದಾರ ಸಹಕಾರ ಸಂಘಗಳ ಪಾತ್ರ, ಜವಾಬ್ದಾರಿ, ಕರ್ತವ್ಯಗಳು ಹಾಗೂ ಹಾಲಿ ಸ್ಥಿತಿಗತಿ, ಯೋಜನೆಯ ವಿವಿಧ ಹಂತಗಳಲ್ಲಿ ನಡೆಯುವ ಚಟುವಟಿಕೆಗಳ ಬಗ್ಗೆ ಚರ್ಚೆ, ಸಂವಾದಗಳು ನಡೆದವು. ನೀರು ಬಳಕೆದಾರ ಸಂಘಗಳ ಅಧ್ಯಕ್ಷರು, ಕಾರ್ಯದರ್ಶಿ ಹಾಗೂ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿದ್ದರು.

**ನೀರು ಬಳಕೆದಾರ ಸಹಕಾರ ಸಂಘಗಳ ವಿವರ**



| ಕ್ರ.ಸಂ. | ಬಳಕೆದಾರ ಸಂಘದ ಹೆಸರು | ಕಾಲುವೆ ದಂಡೆ |
|---|---|---|
| 1 | ಬಾರಂದೂರು | ಬಲದಂಡೆ |
| 2 | ಬಾಬುಳ್ಳಿ | ಬಲದಂಡೆ |
| 3 | ಸೀಗೆಬಾಗಿ | ಬಲದಂಡೆ |
| 4 | ಕಾಗೆಕೊಡಮಗ್ಗಿ | ಬಲದಂಡೆ |
| 5 | ತಳ್ಳಿಕಟ್ಟೆ | ಬಲದಂಡೆ |
| 6 | ಹೊಳೆಹೊನ್ನೂರು | ಬಲದಂಡೆ |
| 7 | ದಾಸರಕಲ್ಲಹಳ್ಳಿ | ಬಲದಂಡೆ |
| 8 | ನಾಗತಿಬೆಳಗಲು | ಬಲದಂಡೆ |
| 9 | ಕೊಪ್ಪದೊಡ್ಡಕೆರೆ | ಬಲದಂಡೆ |
| 10 | ದೊಡ್ಡಗೊಪ್ಪೇನಹಳ್ಳಿ | ಎಡದಂಡೆ |

## ಕರ್ನಾಟಕ ನೀರಾವರಿ ನಿಗಮ ನಿಯಮಿತ

1956ರ ಕಂಪನಿ ಕಾಯ್ದೆಯಡಿ ನೋಂದಣಿಯಾಗಿರುವ ಸಂಸ್ಥೆ. ಕರ್ನಾಟಕ ಸರ್ಕಾರದ ಒಡೆತನದಲ್ಲಿರುವ ಪೂರ್ಣಪ್ರಮಾಣದ ಕಂಪನಿ. 1998ರಲ್ಲಿ ನೀರಾವರಿಗೆ ಸಂಬಂಧಪಟ್ಟ ಎಲ್ಲಾ ಯೋಜನೆಗಳ ಯೋಜನಾ ವರದಿ ಸಿದ್ಧಪಡಿಸುವುದು, ಕ್ರಿಯಾ ಯೋಜನೆ ಸಿದ್ಧಪಡಿಸುವುದು, ಹೊಸ ಆವಿಷ್ಕಾರ, ಅನುಷ್ಠಾನ ಮತ್ತು ನಿರ್ವಹಣೆ ಮಾಡುವ ಸಂಪೂರ್ಣ ಜವಾಬ್ದಾರಿಯನ್ನು ನಿಗಮಕ್ಕೆ ನೀಡಲಾಯಿತು. ನೀರಾವರಿ ಯೋಜನೆಯಿಂದ ತೊಂದರೆಗೊಳಗಾಗುವ ಜನಸಮುದಾಯದ ಪುನಶ್ಚೇತನ ಕಾರ್ಯವೂ ಸಂಸ್ಥೆಯ ಜವಾಬ್ದಾರಿಗಳಲ್ಲೊಂದು. ತನ್ನ ವ್ಯಾಪ್ತಿಯಲ್ಲಿ ಬರುವ ವ್ಯಕ್ತಿಗಳು, ರೈತಗುಂಪುಗಳು, ನಗರಸಭೆಗಳು ಹಾಗೂ ಕಾರ್ಖಾನೆಗಳಿಂದ ಅವರು ಬಳಸಿದ ನೀರಿಗೆ ಪ್ರತಿಯಾಗಿ ಶುಲ್ಕ ಸಂಗ್ರಹಿಸುವ ಅಧಿಕಾರವೂ ನಿಗಮಕ್ಕಿದೆ.

ನಿಗಮಕ್ಕೆ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿದ್ದು, ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಉಪಾಧ್ಯಕ್ಷರಾಗಿರುತ್ತಾರೆ. ಸರ್ಕಾರ ನಿಯಮಿಸುವ ವ್ಯವಸ್ಥಾಪಕ ನಿರ್ದೇಶಕರು ದಿನನಿತ್ಯದ ಕಾರ್ಯಚಟುವಟಿಕೆ ನಿರ್ವಹಿಸುತ್ತಾರೆ. ಇವರಿಗೆ ವಿವಿಧ ಕ್ಷೇತ್ರಗಳಲ್ಲಿ ಪರಿಣಿತರಾದ ವೃತ್ತಿಪರತೆಯುಳ್ಳ ನಿರ್ದೇಶಕರ ತಂಡವು ಸಹಕರಿಸುತ್ತದೆ.

**ಹೊಸ ನೋಟ**

ಇತ್ತೀಚಿನ ವರ್ಷಗಳಲ್ಲಿ ನಿಗಮವು ಸಹಭಾಗಿತ್ವ ನೀರಾವರಿ ನಿರ್ವಹಣೆ, ನವೀನ ಮಾದರಿಯ ನೀರಾವರಿ ಪದ್ಧತಿಗಳಿಗೆ ಪ್ರೋತ್ಸಾಹ, ನೀರಿನ ಮಿತಬಳಕೆಯ ವಿಧಾನಗಳ ಆವಿಷ್ಕಾರ, ಸಮಗ್ರ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವತ್ತ ಕೃಷಿಕರ ಮನವೊಲಿಕೆ ಮುಂತಾದ ಹಲವು ನೂತನ ಪ್ರಯತ್ನಗಳತ್ತ ಹೆಚ್ಚು ಆಸಕ್ತಿ ವಹಿಸಿದೆ.





ಎಡದಂಡೆ ನಾಲೆಯಲ್ಲಿ ಪ್ರಗತಿಯಲ್ಲಿರುವ ಕಿರು ಸೇತುವೆ

**ನಿರೀಕ್ಷಿತ ಫಲಿತಾಂಶಗಳು**

1. ಸಮಗ್ರ ಜಲ ಸಂಪನ್ಮೂಲ ನಿರ್ವಹಣೆಗಾಗಿ ರಾಜ್ಯ ಮತ್ತು ಜಲಾನಯನ ಮಟ್ಟದಲ್ಲಿ ಸಂಸ್ಥೆಗಳ ಬಲವರ್ಧನೆ.
2. ನೀರಾವರಿ ವ್ಯವಸ್ಥೆಯ ಮೂಲಸೌಕರ್ಯಗಳು ಮತ್ತು ನಿರ್ವಹಣೆಯ ಆಧುನೀಕರಣ.
3. ಯೋಜನಾ ನಿರ್ವಹಣೆಯ ಅನುಷ್ಠಾನ ವ್ಯವಸ್ಥೆ

ಈ ಯೋಜನೆಯು ಆಯ್ದ ನದಿ ಜಲಾನಯನ ಪ್ರದೇಶಗಳಲ್ಲಿ ನೀರಾವರಿ ವ್ಯವಸ್ಥೆಯನ್ನು ಉತ್ತಮಪಡಿಸುವ ಮೂಲಕ ಬೇಡಿಕೆಗನುಗುಣವಾಗಿ ನೀರಿನ ಲಭ್ಯತೆಯನ್ನು ಹೆಚ್ಚಿಸುವ ಉದ್ದೇಶ ಹೊಂದಿದೆ. ಅಲ್ಲದೆ ಪರಿಣಾಮಕಾರಿ ನೀರಿನ ಬಳಕೆಯನ್ನು ಜಾರಿಗೊಳಿಸುವ ಮೂಲಕ ಉದ್ಯೋಗ ಅವಕಾಶಗಳನ್ನು ಸೃಜಿಸಿ, ಗ್ರಾಮೀಣ ಜನರ, ಅದರಲ್ಲಿಯೂ ಮುಖ್ಯವಾಗಿ ಮಹಿಳೆಯರ ಆದಾಯ ವೃದ್ಧಿಸಲು ಬೆಂಬಲ ನೀಡಲಿದೆ.

## ಗಾಜನೂರು ಹೊಸಹಳ್ಳಿ ಮಾದರಿ ನೀರು ಬಳಕೆದಾರ ಸಹಕಾರ ಸಂಘದ ಯಶೋಗಾಥೆ

ಗಾಜನೂರು ಹೊಸಹಳ್ಳಿ ನೀರು ಬಳಕೆದಾರರ ಸಹಕಾರ ಸಂಘವು ಮಾದರಿ ಸಂಘವಾಗಿದ್ದು ಕಳೆದ 15 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದೆ. ಆಂತರಿಕ ಆಡಳಿತ, ಕಾಮಗಾರಿ ಅನುಷ್ಠಾನ, ಉಸ್ತುವಾರಿ ಮತ್ತು ನಿರ್ವಹಣೆಯಲ್ಲಿ ಸುಸ್ಥಿರವಾಗಿದೆ. ಸಂಘಕ್ಕೆ 1510 ಎಕರೆ (604 ಹೆಕ್ಟೇರ್) ಅಚ್ಚುಕಟ್ಟು ಪ್ರದೇಶವಿದ್ದು, ತುಂಗಾ ಎಡದಂಡೆ ನಾಲೆ ವ್ಯಾಪ್ತಿಯಲ್ಲಿ ಬರುತ್ತದೆ. ಗಾಜನೂರು, ವೀರಾಪುರ, ಹೊನ್ನಾಪುರ ಮತ್ತು ಹೊಸಹಳ್ಳಿ ಗ್ರಾಮಗಳು ಈ ಸಂಘದ ವ್ಯಾಪ್ತಿಗೆ ಬರುತ್ತವೆ. ಸಂಘವು ದಿನಾಂಕ 13/02/2001ರಲ್ಲಿ ಸಹಕಾರ ಸಂಘಗಳ ಕಾಯ್ದೆಯಡಿ ನೋಂದಣಿ ಆಗಿದೆ. ಕರ್ನಾಟಕ ನೀರಾವರಿ ನಿಗಮ, ಶಿವಮೊಗ್ಗ ಕಛೇರಿಯೊಂದಿಗೆ ಒಪ್ಪಂದ (ಎಂ.ಓ.ಯು.) ಮಾಡಿಕೊಂಡಿದೆ.

ಸಂಘದಲ್ಲಿ 13 ಜನ ಸದಸ್ಯರಿದ್ದು ಕಳೆದ 15 ವರ್ಷಗಳಿಂದ ಅವಿರೋಧವಾಗಿ ಆಯ್ಕೆಯಾಗುತ್ತಿದ್ದಾರೆ. 15 ವರ್ಷಗಳಿಂದ ಯಾವುದೇ ತಂಟೆ–ತಕರಾರು, ವೈಮನಸ್ಸುಗಳು ಈ ಸಂಘದ ಆಡಳಿತದಲ್ಲಿ ತಲೆದೋರದಿರುವುದು ವಿಶೇಷ. ಇದಕ್ಕೆ ಸಮಿತಿಯ ಹಾಗೂ ಅಚ್ಚುಕಟ್ಟುದಾರರ ನಡುವಿನ ಸಮನ್ವಯ ಹಾಗೂ ಸಮಿತಿ ಸದಸ್ಯರ ಸೇವಾ ಮನೋಭಾವ ಮುಖ್ಯ ಕಾರಣವಾಗಿದೆ. ಒಟ್ಟು 636 ಅಚ್ಚುಕಟ್ಟುದಾರರಿದ್ದು ಅದರಲ್ಲಿ 57 ಮಹಿಳಾ ಸದಸ್ಯರಿದ್ದಾರೆ.

ಪ್ರತಿಯೊಬ್ಬರೂ ರೂ. 106 ಸದಸ್ಯತ್ವ ಶುಲ್ಕ (ಷೇರು) ಪಾವತಿಸುವ ಮೂಲಕ ಷೇರುದಾರರಾಗಿರುತ್ತಾರೆ. ಅಂದರೆ ಶೇಕಡಾ 100ರಷ್ಟು ಅಚ್ಚುಕಟ್ಟುದಾರರ ಭಾಗವಹಿಸುವಿಕೆ ಇರುವುದು ಅಪರೂಪದ ಸಂಗತಿಯಾಗಿದೆ. ಷೇರು ಮೊತ್ತದ ಜೊತೆಗೆ ಎಲ್ಲಾ ಸದಸ್ಯರೂ ವಂತಿಕೆಯನ್ನೂ ಸಹ ಪಾವತಿಸಿದ್ದಾರೆ. ಇದು ಪ್ರತಿ ಎಕರೆಗೆ ರೂ.48 ಇದ್ದು ಒಟ್ಟು ರೂ.31100 ಸಂಗ್ರಹವಾಗಿದೆ. ಈ ಮೊತ್ತವನ್ನು ಬ್ಯಾಂಕಿನಲ್ಲಿ ನಿಗದಿತ ಠೇವಣಿ ಇಡಲಾಗಿದೆ. ಈ ವಂತಿಕೆ ಠೇವಣಿಯ ಆಧಾರದ ಮೇಲೆ ಭದ್ರಾ ಕಾಡಾ ವತಿಯಿಂದ ಒಂದು ಅವಧಿಯ ಹಣಕಾಸಿನ ನೆರವು (ಒನ್ ಟೈಮ್ ಫಂಕ್ಷನಲ್ ಗ್ರಾಂಟ್) ರೂಪದಲ್ಲಿ ರೂ. 3.29 ಲಕ್ಷ ಅನುದಾನವನ್ನು ಪಡೆದುಕೊಂಡಿದ್ದಾರೆ. 2004ರಿಂದ 2015ರವರೆಗೆ ನಿರಂತರವಾಗಿ ನೀರಿನ ಕರ ವಸೂಲು ಮಾಡಲಾಗಿದೆ. ಅಚ್ಚುಕಟ್ಟುದಾರರಿಂದ ಸಂಗ್ರಹಿಸಿದ ನೀರಿನ ಕರವನ್ನು ಪ್ರತಿ ವರ್ಷ ನಿಗದಿಯಂತೆ ಸರ್ಕಾರಕ್ಕೆ ಪಾವತಿಸುತ್ತಿರುವುದು ಈ ಸಂಘದ ಹೆಗ್ಗಳಿಕೆಗಳಲ್ಲೊಂದು. ಆ ರೀತಿ 2004ರಿಂದ 2015ರವರೆಗೆ ಎರಡು ವರ್ಷ ಹೊರತುಪಡಿಸಿ ಒಟ್ಟು ರೂ. 603666 ಗಳನ್ನು ಸರ್ಕಾರಕ್ಕೆ ಪಾವತಿಸಿರುವುದು ಪಟ್ಟಿಯಲ್ಲಿ ಗಮನಿಸಬಹುದು.

– ಮಾಹಿತಿ ಸಂಗ್ರಹ ಮತ್ತು ರಚನೆ: ವೀರೇಶ್ ಅಣೆಗೆರೆ

## ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಕಾಮಗಾರಿಗಳು (ಕ್ಯಾಡ್ ಪ್ಯಾಕೇಜ್)

ನೀರು ಬಳಕೆದಾರ ಸಹಕಾರ ಸಂಘಗಳೇ ಕಾಮಗಾರಿ ಕೈಗೊಳ್ಳುವುದು ಈ ಯೋಜನೆಯ ವೈಶಿಷ್ಟ್ಯ. ಗೊಂದಿ ನಾಲಾ ವ್ಯಾಪ್ತಿಯ ಸಂಘಗಳಿಗೆ ಕಾಮಗಾರಿಗಳನ್ನು ನಿರ್ವಹಿಸುವ ಅಧಿಕಾರವನ್ನು ನೀಡಲಾಗಿದೆ. ಸಮುದಾಯವೂ ಸಹ ಇದಕ್ಕೆ ಅದ್ಭುತವಾಗಿ ಪ್ರತಿಕ್ರಿಯಿಸಿದ್ದು ಮುತುವರ್ಜಿ ವಹಿಸಿ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ. ಅವುಗಳ ವಿವರ ಹೀಗಿದೆ.

- ಪ್ರಾಯೋಗಿಕವಾಗಿ ಕಾಗೆಕೊಡಮಗ್ಗಿ ಸಂಘಕ್ಕೆ ಕಾಮಗಾರಿ ನಿರ್ವಹಣೆಯ ಪತ್ರ ಮಾಡಿಕೊಟ್ಟಿದ್ದು ಕ.ನೀ.ನಿ.ನಿ., ಕಾಡಾ ಮತ್ತು ಸಂಘದ ಮಧ್ಯೆ ಒಪ್ಪಂದ ಏರ್ಪಟ್ಟಿದೆ.
- ಏಪ್ರಿಲ್ 4 2017ರ ಅಂತ್ಯಕ್ಕೆ 6 ಸಂಘಗಳಿಗೆ ಒಪ್ಪಂದ ಪತ್ರ ನೀಡಲಾಗಿದೆ. ಅವುಗಳೆಂದರೆ, ಸೀಗೆಬಾಗಿ, ತಳ್ಳಿಕಟ್ಟೆ, ಕಾಗೆ- ಕೊಡಮಗ್ಗೆ, ದೊಡ್ಡಗೊಪ್ಪೇನಹಳ್ಳಿ, ನಾಗತಿಬೆಳಗಲು ಮತ್ತು ಬಾರಂದೂರು. ಒಟ್ಟು 44 ಕ್ಯಾಡ್ ಪ್ಯಾಕೇಜ್ ಕಾಮಗಾರಿಗಳು ಇದರಲ್ಲಿ ಒಳಗೊಂಡಿವೆ.
- ದಿನಾಂಕ 31.01.2017ರಂದು ಮೇಲ್ಕಂಡ ನೀರು ಬಳಕೆದಾರ ಸಂಘಗಳಿಗೆ ಒಪ್ಪಂದ ಪತ್ರವನ್ನು ಹಂಸ್ತಾಂತರಿಸಲಾಯಿತು.

## ಜನವರಿ–ಮಾರ್ಚ್ 2017ರ ಅವಧಿಯಲ್ಲಿ ನಡೆದ ಪ್ರಮುಖ ತರಬೇತಿಗಳು

| ವಿಷಯ | ದಿನಾಂಕ | ಸ್ಥಳ | ಭಾಗವಹಿಸಿದವರು | ಸಂಪನ್ಮೂಲ ವ್ಯಕ್ತಿ/ |
|---|---|---|---|---|
| ಕಾಮಗಾರಿ ನಿರ್ವಹಣೆ ಮತ್ತು ಗುಣಮಟ್ಟ ನಿಯಂತ್ರಣ | **27.02.2017** | ಹೋಟೆಲ್ ಸೂರ್ಯ ಕಂಫರ್ಟ್ಸ್, ಭದ್ರಾವತಿ | ನೀರು ಬಳಕೆದಾರ ಸಂಘಗಳ ನಿರ್ದೇಶಕರು, ಪ್ರಗತಿಪರ ರೈತರು ಮತ್ತು ಗುತ್ತಿಗೆದಾರರು | ಯೋಜನಾ ಸಹಾಯ ಸಂಸ್ಥೆ, ಗುಣಮಟ್ಟ ನಿಯಂತ್ರಣ ಇಂಜಿನಿಯರುಗಳು |
| ಲೆಕ್ಕಪತ್ರ ಬರವಣಿಗೆ ಮತ್ತು ಕಾಮಗಾರಿ ನಿರ್ವಹಣೆ | **24.03.2017** | ಭದ್ರಾ ಕಾಡಾ ಸಭಾಂಗಣ, ಶಿವಮೊಗ್ಗ | ನೀರು ಬಳಕೆದಾರ ಸಂಘಗಳ ಪದಾದಿ , ಕಾರಿಗಳು | ಯೋಜನಾ ಸಹಾಯ ಸಂಸ್ಥೆ, ತಜ್ಞ ಸಂಪನ್ಮೂಲ ವ್ಯಕ್ತಿಗಳು |
| ಲಿಂಗತ್ವ ಮತ್ತು ಸಾಮಾಜಿಕ ಪರಿಕಲ್ಪನೆ ಸಂವಾದ | **31.3.2017** | ಸೀಗೆಬಾಗಿ ನೀ.ಬ.ಸ.ಸಂ. ಕಛೇರಿ | 18 ಮಹಿಳೆಯರು ಹಾಗೂ ಯೋಜನಾ ಸಹಾಯ ಸಂಸ್ಥೆ ಸದಸ್ಯರು | ಯೋಜನಾ ಸಹಾಯ ಸಂಸ್ಥೆ |





ಕಾಗೆಕೊಡಮಗ್ಗಿ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಕಾಮಗಾರಿ

# ಸರಾಗವಾಗಿ ಹರಿಯುವ ನೀರು

ಗೊಂದಿ ಆಧುನೀಕರಣ ಕಾಮಗಾರಿಗಳು ಚಾಲ್ತಿಯಲ್ಲಿವೆ. ಸಂಪೂರ್ಣ ಮುಗಿಯುವ ಮೊದಲೇ ಅದರ ಸಕಾರಾತ್ಮಕ ಪರಿಣಾಮ ಕಣ್ಣಿಗೆ ಕಾಣುತ್ತಿದೆ. ಮುಖ್ಯ ಕಾಲುವೆಯಲ್ಲಿ ಹೂಳು ತೆಗೆದು ಸ್ವಲ್ಪ ಪ್ರಮಾಣದಲ್ಲಿ ಕಾಂಕ್ರೀಟ್ ಲೈನಿಂಗ್ ಮಾಡಿರುವುದರಿಂದ ಭದ್ರಾ ಜಲಾಶಯದಿದ ಗೊಂದಿ ನಾಲೆಗೆ ಬಿಟ್ಟ ನೀರು ಸರಾಗವಾಗಿ ಹರಿಯುತ್ತಿದೆ. ಅದರಲ್ಲಿಯೂ ಕಾಗೆ ಕೊಡಮಗ್ಗೆ ಗ್ರಾಮದಲ್ಲಿ ಅಚ್ಚುಕಟ್ಟು ಪ್ರದೇಶದ ಕಾಲುವೆ ಕಾಮಗಾರಿಗಳೂ ಸಹ ಆರಂಭವಾಗಿ ಪ್ರಗತಿಯಲ್ಲಿದ್ದು ಮಾರ್ಚ್ 2017ರಲ್ಲಿ ನೀರು ಬಿಟ್ಟಾಗ ಸುಗಮವಾಗಿ ಹರಿದು ರೈತರ ಸಂತೋಷಕ್ಕೆ ಕಾರಣವಾಗಿದೆ. ಆ ಅನುಭವವನ್ನು ಕೆಲ ರೈತರು ಇಲ್ಲಿ ಹಂಚಿಕೊಂಡಿದ್ದಾರೆ.



ಲಕ್ಷಮ್ಮ, ಕೃಷಿಕ ಮಹಿಳೆ, ಕಾಗೆಕೊಡಮಗ್ಗೆ: ಕಾಣಿ (ಕಾಲುವೆ) ಮಾಡಿದ್ಮೇಲೆ ಅನುಕೂಲ ಆಯ್ತು, ಮೊದಲೆಲ್ಲಾ ಹೂಳು ತುಂಬ್ಕೊಂಡು 4–5 ಜನ ಕೂಲಿಯವರಿಂದ ಕ್ಲೀನ್ ಮಾಡಿಸಬೇಕಿತ್ತು, ಈಗ ಆ ತಾಪತ್ರಯ ಇಲ್ಲ.



ಅರುಣ್, ಕೃಷಿಕ, ಕಾಗೆಕೊಡಮಗ್ಗಿ: ಮುಂಚೆ ನೀರು ಬಿಟ್ರೆ ಕೊಚ್ಕೊಂಡು ಹೋಗಿ ವೇಸ್ಟ್ ಆಗೋದು, ಆಕಡೆ ಈಕಡೆ ಹೋಗ್ತಾ ಇತ್ತು, ನಮ್ ಗದ್ದೆಗೆ ಅರ್ಧ ಬಂದ್ರೆ ಪಕ್ಕದ ಗದ್ದೆಗೆ ಅರ್ಧ ಹೋಗ್ತಾ ಇತ್ತು, ಈಗ ಕೆಲಸ ಮಾಡಿದ ಮೇಲೆ ಸಲೀಸಾಗಿ ನೀರು ಹರಿಯುತ್ತೆ, ನಮ್ಮ ಗದ್ದೆ ಹತ್ರ ನಾವೇ ನಿಂತು ಕೆಲಸ ಮಾಡಿಸಿದ್ದೀವಿ.



ಭಾಗ್ಯಮ್ಮ, ಕೂಲಿಕಾರರ ಮೇಸ್ತ್ರಿ, ಕೆ.ಕೆ.ಹೊಸೂರು: ಕಾಲುವೆ ಒಡಕಂಡು ಹೋಗದು, ಮುಂದಕ್ಕೆ ನೀರು ಬರ್ತಿರ್ಲಿಲ್ಲ, ಡ್ಯಾಂ ಹತ್ರ ಇರೋರಿಗೆ ಮಾತ್ರ ಹೆಚ್ಚಿಗೆ ನೀರು ಸಿಗೋದು. ಈಗ ಕಾಲುವೆ ಕೆಲಸ ಮಾಡಿಸೋದ್ರಿಂದ ಬೀಳು ಬಿದ್ದಿರೋ ಹೊಲಗಳಲ್ಲಿ ಮತ್ತೆ ಭತ್ತ ಹಾಕಬಹುದು. ಕಬ್ಬು, ಅಡಿಕೆ ತೋಟಗಳು ಒಣಗುವುದಿಲ್ಲ. ನೀರು ಸರಾಗವಾಗಿ ಬಂದ್ರೆ ಎಲ್ಲರಿಗೂ ಸಿಗುತ್ತೆ, ಜಗಳ–ಗುದ್ದಾಟ ಇರೋದಿಲ್ಲ. ಈಗ ಎಲ್ಲರಿಗೂ ನೀರು ಸಿಗುತ್ತೆ.



ಅಬ್ದುಲ್ ಸತ್ತಾರ್, ಕೃಷಿಕ, ಕಾಗೆಕೊಡಮಗ್ಗಿ: ಮೊದಲು ಕಾಲುವೆಗೆ ನೀರು ಬಿಟ್ರೆ ನಮ್ಮೂರಿಗೆ ಬರಲು 7–8 ದಿವಸ ಆಗ್ತಾ ಇತ್ತು, ಈಸಲ ಕೇವಲ 2–3 ದಿವಸಕ್ಕೆ ಬಂತು. ಮುಂಚೆ ಕಾಲುವೆ ಎಲ್ಲಾ ಕೆರೆ ಆಗಿತ್ತು. ಮುಚ್ಚಿ ಹೋಗಿ ನೀರು ಅಲ್ಲಲ್ಲೆ ನಿಂತು ಹಳ್ಳಕ್ಕೆ ಹೋಗ್ತಾ ಇತ್ತು. ಈಗ ಅದೆಲ್ಲಾ ಕಂಟ್ರೋಲ್ ಆಗಿದೆ.



ಭಾರತಿ, ಗೃಹಿಣಿ, ಕಾಗೆಕೊಡಮಗ್ಗೆ: ಮುಂಚೆ ಕಾಲುವೆಯಲ್ಲಿ ಕಸ–ಕಡ್ಡಿ ಬೆಳೆದಿತ್ತು, ಹಾವುಗಳು ಬರ್ತಾ ಇದ್ವು, ನೀರೂ ಸಹ ಗಲೀಜಾಗಿತ್ತು, ಹೊಸದಾಗಿ ಕಾಲುವೆ ಮಾಡಿದ ಮೇಲೆ ನೀರು ಚೆನ್ನಾಗಿ ಬರ್ತಿದೆ. ಪಾತ್ರೆ ತೋಳೀಲಿಕ್ಕೆ, ಬಟ್ಟೆ ಒಗೆಯೋಕೆ ಅನುಕೂಲ ಆಗಿದೆ.



ಸೈಫಾನ್, ವಿದ್ಯಾರ್ಥಿ, ಕಾಗೆಕೊಡಮಗ್ಗೆ: ಈಗ ಕಾಲುವೆಯಲ್ಲಿ ಈಜಾಡ್ತೀವಿ, ಹಾವುಗಳು ಬರಲ್ಲ. ನೀರೂ ಚೆನ್ನಾಗಿದೆ.

ಅಬ್ದುಲ್ ಸಗೀರ್, ಕೃಷಿಕ, ಕಾಗೆಕೊಡಮಗ್ಗೆ: ಕಾಮಗಾರಿ ಗುಣಮಟ್ಟ ಚೆನ್ನಾಗಿದೆ, ನಮ್ಮ 5 ಎಕರೆ ಗದ್ದೆಗೆ ನೀರು ಸರಾಗವಾಗಿ ಬರ್ತಿದೆ.

ಅಬ್ಬಾಸ್, ಕೃಷಿಕ, ಕಾಗೆಕೊಡಮಗ್ಗೆ: ಮೊದಲು ನೀರು ಬಿಟ್ಟಾಗ ಗದ್ದೆಗಳಿಗೆ ನುಗ್ಗುತ್ತಿತ್ತು, ವೇಸ್ಟ್ ಆಗ್ತಿತ್ತು, ಈಗ ಸರಾಗವಾಗಿ ಹರಿಯುತ್ತೆ.



ರವಿಕುಮಾರ್, ಕಾರ್ಯದರ್ಶಿ, ನೀರು ಬಳಕೆದಾರರ ಸಹಕಾರ ಸಂಘ, ಕಾಗೆಕೊಡಮಗ್ಗೆ: ಗೊಂದಿ ಮುಖ್ಯ ಕಾಲುವೆಯಲ್ಲಿ ಹೂಳು ತುಂಬಿಕೊಂಡು ನೀರು ಬಿಟ್ಟು 15 ದಿನ ಆದ್ರೂ ನಮ್ಮೂರಿನ 7ನೇ ಬ್ರಾಂಚ್ ಕಾಲುವೆಗೆ ಬರ್ತಾ ಇರಲಿಲ್ಲ. ಈಗ ಲೈನಿಂಗ್ ಮಾಡ್ತಾ ಇರೋದ್ರಿಂದ ನಾಲೆಗೆ ನೀರು ಬಿಟ್ಟು 3 ದಿನಕ್ಕೇ ನಮ್ಮ ಕಾಲುವೆಗೆ ಬಂದಿದೆ. ನಮ್ಮ ಗ್ರಾಮಕ್ಕೆ 85 ಹೆಕ್ಟೇರ್ ಅಚ್ಚುಕಟ್ಟಿದ್ದು 2–3 ದಿವಸದಲ್ಲೇ ಅಷ್ಟೂ ಜಮೀನಿಗೆ ನೀರು ಹಾಯ್ದಿದೆ. ಮುಂಚೆ 10–15 ದಿನ ಬೇಕಿತ್ತು.

ಸಂದರ್ಶನ: ಮಲ್ಲಿಕಾರ್ಜುನ, ಸಂವಹನ ತಜ್ಞ, ಸ್ಪೈಕ್



ಗೊಂದಿ ಅಚ್ಚುಕಟ್ಟು ಪ್ರದೇಶದ ನಕ್ಷೆ

## ಯೋಜನಾ ಸಮಾಲೋಚಕ ಸಹಾಯ ಸಂಸ್ಥೆ

ಯೋಜನಾ ಸಹಾಯ ಸಂಸ್ಥೆಯಾಗಿ ನೇಮಕವಾಗಿರುವ ಎಸ್.ಎಂ.ಇ.ಸಿ. ಇಂಡಿಯಾ ಪ್ರೈವೇಟ್ ಲಿಮಿಟೆಡ್ ಫಲ ತಾಂಶಗಳ ಸಾಧನೆಗಾಗಿ ಹಾಗೂ ಚಟುವಟಿಕೆಗಳ ಅನುಷ್ಠಾನಕ್ಕಾಗಿ ಕರ್ನಾಟಕ ನೀರಾವರಿ ನಿಗಮಕ್ಕೆ ಸಹಕರಿಸಲಿದೆ.

ಜೊತೆಗೆ ನಿಗಮ, ಕಾಡಾ ಮತ್ತು ನೀರು ಬಳಕೆದಾರ ಸಂಘಗಳ ಸಾಮರ್ಥ್ಯ ಬಲವರ್ಧನೆ, ಯೋಜನೆಯ ಮೌಲ್ಯಮಾಪನೆ ಮತ್ತು ಪರಿವೀಕ್ಷಣೆಯಲ್ಲೂ

**ಯೋಜನಾ ಸಹಾಯ ಸಂಸ್ಥೆ ಸೇವೆಯ ಉದ್ದೇಶಗಳು**

- ಯೋಜನಾ ಪರಿವೀಕ್ಷಣಾ ಘಟಕ ಮತ್ತು ಯೋಜನಾ ಅನುಷ್ಠಾನ ಸಂಸ್ಥೆಗೆ ಕಾರ್ಯಕ್ರಮ ಅನುಷ್ಠಾನದಲ್ಲಿ ನೆರವು ನೀಡುವುದು
- ಯೋಜನಾ ಅನುಷ್ಠಾನ ಸಂಸ್ಥೆ, ನೀರು ಬಳಕೆದಾರ ಸಂಘಗಳಿಗೆ ಹಾಗೂ ಇನ್ನಿತರೆ ಸಂಬಂಧಪಟ್ಟ ಸಂಸ್ಥೆಗಳಿಗೆ ಸಾಮರ್ಥ್ಯಾಭಿವೃದ್ಧಿ ಮಾಡುವುದು.
- ಗೊಂದಿ ನೀರಾವರಿ ಉಪಯೋಜನೆಯ ಕಾಮಗಾರಿಗಳು ಮತ್ತು ಸಾಂಸ್ಥಿಕ ಚಟುವಟಿಕೆಗಳ ನಿಗಾ ಮಾಡುವುದು ಮತ್ತು ಗುಣಮಟ್ಟ ಪರಿಶೀಲಿಸುವುದು.
- ಗೊಂದಿ ಉಪಯೋಜನೆಗೆ ತಾಂತ್ರಿಕ ಸಲಹೆ ನೀಡುವುದು ಮತ್ತು 2ನೇ ಹಂತದ ಚಟುವಟಿಕೆಗಳ ಬಗ್ಗೆ ಅರಿವು ಮೂಡಿಸುವುದು.
- 2ನೇ ಹಂತದ ಉಪಯೋಜನೆಗಳಿಗೆ ಯೋಜನೆ ರೂಪಿಸುವುದು ಮತ್ತು ಸೂಕ್ತ ವರದಿಗಳನ್ನು ತಯಾರಿಸುವುದು.
- ದತ್ತಾಂಶ ಸಂಗ್ರಹಣೆ, ನಿಯಮಿತ ಯೋಜನಾ ಪ್ರಗತಿ ವರದಿಗಳು ಮತ್ತು ಇತರೆ ಮಾಹಿತಿ ಸಂಗ್ರಹಣೆಗೆ ಬೇಕಾದ ತಾಂತ್ರಿಕ ಸೇವೆ ಒದಗಿಸುವುದು.



ಕಾರ್ಯಾಗಾರದಲ್ಲಿ ಭಾಗವಹಿಸಿದ ಪ್ರತಿನಿಧಿಗಳು

ಗೊಂದಿ ನಾಲೆಯ ಆಧುನೀಕರಣ ಕಾಮಗಾರಿಗಳು ಆರಂಭವಾಗಿರುವ ಹಿನ್ನೆಲೆಯಲ್ಲಿ ಒಂದು ದಿನದ ನಿರ್ಮಾಣ ನಿರ್ವಹಣೆ ಮತ್ತು ಗುಣಮಟ್ಟ ನಿಯಂತ್ರಣ ತರಬೇತಿ ಕಾರ್ಯಾಗಾರವನ್ನು ಯೋಜನಾ ಸೇವಾ ಸಂಸ್ಥೆಯಿಂದ (ಪಿ.ಎಸ್.ಸಿ.) ಆಯೋಜಿಸಲಾಗಿತ್ತು.

## ಗುಣಮಟ್ಟ ನಿಯಂತ್ರಣ ಕಾರ್ಯಾಗಾರ

ದಿನಾಂಕ 27.2.2016ರಂದು ಶಿವಮೊಗ್ಗದಲ್ಲಿ ನಡೆದ ಈ ಕಾರ್ಯಾಗಾರದಲ್ಲಿ ಕರ್ನಾಟಕ ನೀರಾವರಿ ನಿಗಮ ನಿಯಮಿತ, ಭದ್ರಾ ಅಚ್ಚುಕಟ್ಟು ಪ್ರಾಧಿಕಾರ (ಕಾಡಾ) ಮತ್ತು ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸುವ ಗುತ್ತಿಗೆದಾರರ ವತಿಯಿಂದ 50ಕ್ಕೂ ಅಧಿಕ ಇಂಜನಿಯರುಗಳು ಹಾಗೂ ಇತರೆ ಸಿಬ್ಬಂದಿಗಳು ಭಾಗವಹಿಸಿದ್ದರು.

ತರಬೇತಿಯಲ್ಲಿ ಮುಖ್ಯವಾಗಿ ಸಿವಿಲ್ ಕಾಮಗಾರಿಗಳ ನಿರ್ವಹಣೆ ಮತ್ತು ಗುಣಮಟ್ಟ ಖಾತರಿ ಹಾಗೂ ಗುಣಮಟ್ಟ ನಿಯಂತ್ರಣ ಪ್ರಕ್ರಿಯೆಗಳ ಬಗ್ಗೆ ಚರ್ಚಿಸಲಾಯಿತು. ಅಲ್ಲದೆ ಯೋಜನೆಯ ಉದ್ದೇಶಗಳು, ವ್ಯಾಪ್ತಿ, ಸಾಮಾಜಿಕ ಸುರಕ್ಷತಾ ಚಟುವಟಿಕೆಗಳ ಮಹತ್ವ, ಗಮನಿಸಬೇಕಾದ ಪರಿಸರ ಸೂಕ್ಷ್ಮತೆ ಅಂಶಗಳ ಬಗ್ಗೆಯೂ ವಿವರಿಸಲಾಯಿತು.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**

ಎಸ್.ಎಂ.ಇ.ಸಿ. ನಂ. 28, ಭಾಗ್ಯ ನಿಲಯ, 1ನೇ ಅಡ್ಡರಸ್ತೆ ಬೀದಿ ಗಾಂಧಿ ನಗರ, ಶಿವಮೊಗ್ಗ-577201

ಮುಖ್ಯ ಇಂಜಿನಿಯರ್, ಯೋಜನಾ ಅನುಷ್ಠಾನ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ ತುಂಗಾ ಮೇಲ್ದಂಡೆ ಯೋಜನೆ ಶಿವಮೊಗ್ಗ – 577201

ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಮಲವಗೊಪ್ಪ ಶಿವಮೊಗ್ಗ – 577222

## ಕಾಡಾ: ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ

ಕಾಲುವೆ ನೀರಾವರಿ ಅಚ್ಚುಕಟ್ಟು ಪ್ರದೇಶದ ಸಮಗ್ರ ಅಭಿವೃದ್ಧಿಗಾಗಿ ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರವನ್ನು 1979-80ರಲ್ಲಿ ಕರ್ನಾಟಕ ವಿಧಾನ ಮಂಡಲವು ಅಂಗೀಕರಿಸಿದ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಅಧಿನಿಯಮ 1980ರ ಕಾಯಿದೆಯಂತೆ ರಚಿಸಲಾಗಿದೆ. ಈ ಪ್ರಾಧಿಕಾರದ ವ್ಯಾಪ್ತಿಗೆ ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಹಾವೇರಿ, ಗದಗ, ತುಮಕೂರು, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳು ಸೇರುತ್ತವೆ. 30 ಬೃಹತ್ ಹಾಗೂ ಮಧ್ಯಮ ನೀರಾವರಿ ಯೋಜನೆಗಳ ಭೌಗೋಳಿಕ ವ್ಯಾಪ್ತಿಯು ಪ್ರಾಧಿಕಾರದಡಿ ಬರುತ್ತದೆ. ಯೋಜನಾ ವ್ಯಾಪ್ತಿಯಲ್ಲಿ ನೆಲ-ಜಲ ಸಂರಕ್ಷಣೆ, ಹೊಲಗಾಲುವೆ ಹಾಗೂ ಬಸಿಗಾಲುವೆಗಳ ನಿರ್ಮಾಣ, ಜೌಗು ಮತ್ತು ಸವಳು ಪ್ರದೇಶವನ್ನು ಫಲವತ್ತು ಗೊಳಿಸುವುದು, ಅಚ್ಚುಕಟ್ಟು ಪ್ರದೇಶದಲ್ಲಿ ರಸ್ತೆ ನಿರ್ಮಾಣ, ವಾರಾಬಂದಿ ಮೇಲ್ವಿಚಾರಣೆ ಹಾಗೂ ಮುಖ್ಯವಾಗಿ ನೀರು ಬಳಕೆದಾರ ಸಹಕಾರ ಸಂಘಗಳ ಸ್ಥಾಪನೆ ಮತ್ತು ನಿರ್ವಹಣೆ ಕಾರ್ಯಗಳನ್ನು ಪ್ರಾಧಿಕಾರ ಅನುಷ್ಠಾನಗೊಳಿಸುತ್ತಿದೆ.